SEVA BHARATHI
सेवा ही परमो धर्मः

ಸಂಪುಟ : 03
ಸಂಚಿಕೆ : 06

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ-2019 ಪುರಸ್ಕೃತ ಸಂಸ್ಥೆ)
ಮಾಸಿಕ e-ನ್ಯೂಸ್ ಲೆಟರ್ - ಆಗಸ್ಟ್ 2022

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. - 574 216

## ಉತ್ತರ ಕನ್ನಡ ಜಿಲ್ಲೆಗೆ ಸೇವಾಕಾರ್ಯ ವಿಸ್ತರಣೆ











## ಕೇಂದ್ರ ಸಚಿವೆ ಶ್ರೀಮತಿ ಶೋಭಾ ಕರಂದ್ಲಾಜೆ ಭೇಟಿ

## ಆನ್ ಲೈನ್ ಕಾರ್ಯಾಗಾರ

## ಕುಮಟಾ ಭೇಟಿ

## ಪ್ಲಾಸ್ಟಿಕ್ ನಿಷೇಧ ಜಾಗೃತಿ: ದೇಶ ಪರ್ಯಟನೆ

## ಸೇವಾಧಾಮದಲ್ಲಿ ಮಾದರಿ ಹುಟ್ಟುಹಬ್ಬ ಆಚರಣೆ

**ಯಶೋಗಾಥೆ**

## ವಿಶ್ವಾಸದ ಬದುಕಿಗೆ ಮಡದಿಯಾದಳು ಊರುಗೋಲು

ಸ್ವಾಧೀನ ಕಳಕೊಂಡ ಸರ್ವೋತ್ತಮರ ಬದುಕಿಗೆ ಸೇವಾಧಾಮ ಕಲ್ಪಿಸಿತು ಪುನಃಶ್ಚೇತನ

Mob. : 99454 91241 | E-mail: sevabharathikanyady@gmail.com | Website: www.sevaabharathi.org

## ನಮ್ಮಿಂದಿಷ್ಟು

ಉತ್ತರ ಕನ್ನಡ ಜಿಲ್ಲೆಯ ಮೊತ್ತಮೊದಲ ಹೆಜ್ಜೆ ಬಹು ಅಚ್ಚುಕಟ್ಟು ಹಾಗೂ ವ್ಯವಸ್ಥಿತವಾಗಿತ್ತು. ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ಮತ್ತು ತಾಲೂಕುಗಳ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ನಾವು ಕೃತಜ್ಞರು. ಬೆನ್ನುಹುರಿಯ ಅಪಘಾತ ಮತ್ತು ಅದರ ನಿರ್ವಹಣೆ ಹಾಗೂ ದ್ವಿತೀಯಾಂತರದ ಸಮಸ್ಯೆಗಳ ಬಗ್ಗೆ ತಿಳಿದು ಕೊಳ್ಳುವ ಮತ್ತು ಅಂತಹವರನ್ನು ಗುರುತಿಸುವ ಕಾರ್ಯಕ್ಕೆ ಎಲ್ಲಾ ಗ್ರಾಮೀಣ ಪುನರ್ವಸತಿ ಕಾರ್ಯ ಕರ್ತರು (VRW) ಹಾಗೂ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರು (MRW) ಸೇರಿ ಮುಂದಾಗುತ್ತೇವೆ ಎಂದು ಭರವಸೆ ನೀಡಿರುವುದು ಈ ಅಂಗವಿಕಲತೆಗೆ ದೊರಕಿದ ಮೊದಲ ಯಶಸ್ಸು ಎನ್ನಬಹುದು.

ಪ್ರತಿ ತಿಂಗಳ 2ನೇ ಸೋಮವಾರ ನಡೆಯುವ ಆನ್‌ಲೈನ್ ಕಾರ್ಯಗಾರವೂ ಯಶಸ್ಸುಗೊಳ್ಳುತ್ತಿರುವುದು ಅದರಲ್ಲಿ ಭಾಗವಹಿಸುವ ಫಲಾನುಭವಿಗಳ ಸಂಖ್ಯೆಗಳ ಏರುವಿಕೆಯಿಂದ ಕಾಣಬಹುದಾಗಿದೆ.

ಸೆಪ್ಟೆಂಬರ್ 5 ರಂದು ವಿಶ್ವ ಬೆನ್ನುಹುರಿ ಅಪಘಾತ ದಿನದ ಆಚರಣೆ ಬಗ್ಗೆ ತಯಾರಿಗಳು ನಡೆದಿದೆ. ವಿವಿಧ ಜಿಲ್ಲೆಗಳಲ್ಲಿ ವಿವಿಧ ಸಂಘಟನೆಗಳು ಹಾಗೂ ಇಲಾಖೆಗಳ ಸಹಕಾರದಿಂದ, ದಾನಿಗಳ ಸಹಾಯಹಸ್ತದಿಂದ ಈ ಆಚರಣೆ ಅರ್ಥಗರ್ಭಿತ ವಾಗಬೇಕೆಂದು ನಮ್ಮೆಲ್ಲರ ಆಶಯ.

ಸಂಚಿಕೆಯಲ್ಲಿ ಪ್ರಕಟವಾಗುವ ಯಶೋಗಾಥೆಗೆ ಅತ್ಯದ್ಭುತ ಸ್ಪಂದನೆ ಸಿಗುತ್ತಿದೆ. ಪರಿಶ್ರಮಕ್ಕೆ ಸಂದ ಗರಿ ಎಂದರೂ ತಪ್ಪಾಗಲಾರದು. ಸಮಾಜದ ಕಣ್ಣು ಈ ಅಂಗವೈಕಲ್ಯದತ್ತ ಹೊರಳಲೂ ಇದೂ ಕಾರಣೀ ಭೂತವಾಗುತ್ತಿದೆ. ಒಟ್ಟಿನಲ್ಲಿ ಸಂಘಟಿತ ಶಕ್ತಿಯಿಂದ ಸಮಾಜದ ಕೊರತೆಯನ್ನು ಕಾಳಿನಷ್ಟಾದರೂ ನೀಗಿಸಲು ಸಾಧ್ಯವಾಗುತ್ತಿರುವುದೇ ಧನ್ಯತೆಯ ವಿಚಾರ.

ಆಗಲೇ **ಸೇವಾ ಹಿ ಪರಮೋ ಧರ್ಮಃ ॥** ಕ್ಕೆ ಮತ್ತೆ ಮತ್ತೆ ಬೆಲೆ ಬಂದಂತಾಗುತ್ತದೆ.

**ಇತೀ ತಮ್ಮವ**
**ಕೆ. ವಿನಾಯಕ ರಾವ್**

## ನಮ್ಮ ವಿಳಾಸ


**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಜಿಲ್ಲಾ ಕಚೇರಿ :**

ಸೇವಾನಿಕೇತನ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ
ಹೆರ್ಗ, ಉಡುಪಿ ತಾಲೂಕು – 576 107
ಮೊ.: 9606044893

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)

ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888



## ನಮ್ಮ ತಂಡ

ಶ್ರೀ ಕೆ. ವಿನಾಯಕ ರಾವ್ – ಅಧ್ಯಕ್ಷರು
ಶ್ರೀಮತಿ ಸ್ವರ್ಣಗೌರಿ – ಕಾರ್ಯದರ್ಶಿ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ – ಖಜಾಂಚಿ
ಶ್ರೀ ಕೆ. ಯು. ಗಿರೀಶ್ ರಾವ್ – ಉಪಾಧ್ಯಕ್ಷರು
ಶ್ರೀ ಕೆ. ಬಾಲಕೃಷ್ಣ – ಟ್ರಸ್ಟಿ

## ಸಲಹಾ ಮಂಡಳಿ

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಶ್ರೀಮತಿ ಮನೋರಮ ಭಟ್
ಶ್ರೀ ಉದಯಶಂಕರ್
ಶ್ರೀ ಹರೀಶ್ ಟಿ. ಪಿ.
ಶ್ರೀ ಗೋಪಾಲ ಕೆ. ಪಿ.
ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ
ಶ್ರೀಮತಿ ಜ್ಯೊಸ್ ಪಿರೇರಾ

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್ – ಸಂಚಾಲಕರು, ಸೇವಾಧಾಮ
ಶ್ರೀ ರಾಯನ್ ಫೆರ್ನಾಂಡಿಸ್ – ನಿರ್ದೇಶಕರು, ಸೇವಾಧಾಮ
ಶ್ರೀ ವಿಜಯ ಕೊಡವೂರು – ನಿರ್ದೇಶಕರು, ಸೇವಾಧಾಮ
ಡಾ. ಮುರಳೀಧರ ನಾಯಕ್ – ನಿರ್ದೇಶಕರು, ಸೇವಾಧಾಮ

# ಉತ್ತರ ಕನ್ನಡ ಜಿಲ್ಲೆಗೆ ಸೇವಾಕಾರ್ಯ ವಿಸ್ತರಣೆ











**18.08.2022 ಉತ್ತರಕನ್ನಡ :** ಕುಮಟಾ, ಹೊನ್ನಾವರ, ಅಂಕೋಲ, ಕಾರವಾರ, ಮುಂಡಗೋಡ, ಹಳಿಯಾಳ, ಜೋಯಿಡಾ ಮತ್ತು ಭಟ್ಕಳ ತಾಲೂಕಿನ ಎಂ.ಆರ್. ಡಬ್ಲ್ಯೂ ಮತ್ತು ವಿ.ಆರ್.ಡಬ್ಲ್ಯೂಗಳಿಗೆ ಬೆನ್ನುಹುರಿಯ ಅಪಘಾತದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸೇವಾಧಾಮದ ನಿರ್ದೇಶಕರಾದ ರಾಯನ್ ಫೆರ್ನಾಂಡಿಸ್ ಅವರು ಎಂ.ಆರ್.ಡಬ್ಲ್ಯೂ ಮತ್ತು ವಿ.ಆರ್.ಡಬ್ಲ್ಯೂಗಳಿಗೆ "ಬೆನ್ನುಹುರಿ ಅಪಘಾತ ಮತ್ತು ಅದರ ನಿರ್ವಹಣೆ" ಕುರಿತು ತರಬೇತಿಯನ್ನು ನಡೆಸಲಾಯಿತು. 60ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಹಿತೈಷಿಗಳಾದ ಮೋಹನ್ ಗುನಗಾ ಹಾಗೂ ಕಾರ್ಯಕರ್ತರಾದ ಐವನ್, ಕಾರ್ಯಕಾರಿ ನಿರ್ದೇಶಕಿ ರೂಪಲಕ್ಷ್ಮಿ, ಜಿಲ್ಲಾ ಸಂಯೋಜಕರಾದ ಆಶ್ರೀತ್, ಕ್ಷೇತ್ರ ಸಂಯೋಜಕರಾದ ಪುರುಷೋತ್ತಮ್ ಉಪಸ್ಥಿತರಿದ್ದರು. ಡಾ.ರಾಜೇಶ್ ಕಿಣಿಯವರು ಸೇವಾಭಾರತಿಯ ಸೇವೆಯನ್ನು ಶ್ಲಾಘಿಸಿದರು.

## ತರಬೇತಿ

**20.08.2022 ಉತ್ತರಕನ್ನಡ :** ಸೇವಾಭಾರತಿ ವತಿಯಿಂದ ಶಿರಸಿಯ ಸಿ.ಡಿ.ಪಿ.ಓ. ಕಚೇರಿಯಲ್ಲಿ ಎಂ.ಆರ್.ಡಬ್ಲ್ಯೂ ಮತ್ತು ವಿ.ಆರ್.ಡಬ್ಲ್ಯೂ.ಗಳಿಗೆ "ಬೆನ್ನುಹುರಿ ಅಪಘಾತ ಮತ್ತು ಅದರ ನಿರ್ವಹಣೆ" ಕುರಿತು ತರಬೇತಿಯನ್ನು ಆಯೋಜಿಸಲಾಯಿತು.. 58ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ರೋ। ಮಹೇಶ್ ತೆಲಂಗ್ ಅವರು ಬೆನ್ನುಹುರಿ ಗಾಯದೊಂದಿಗಿನ ತಮ್ಮ ವೈಯುಕ್ತಿಕ ಅನುಭವವನ್ನು ಹಂಚಿಕೊಂಡರು.



## ದಾನಿಗಳು



**10.08.2022 : ಹೆರ್ಗ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷರಾದ ದಿನಕರ ಶೆಟ್ಟಿ ಹಾಗೂ ಸಿ.ಇ.ಓ ರಮೇಶ್‌ರವರು ಸೇವಾಧಾಮದ ದಿನಸಿ ಸಾಮಾಗ್ರಿಗಳ ಖರ್ಚಿಗೆ ರೂ. 50,000– ದೇಣಿಗೆ ನೀಡಿರುತ್ತಾರೆ. ಸೇವಾಭಾರತಿಯಿಂದ ನಿರ್ದೇಶಕರಾದ ಶ್ರೀ ರಾಯನ್ ಫೆರ್ನಾಂಡೀಸ್, ಶ್ರೀ ಐವಾನ್ ಮತ್ತು ಕಾರ್ಯಕಾರಿ ನಿರ್ದೇಶಕಿ ರೂಪಲಕ್ಷ್ಮಿ ಚೆಕ್ ಸ್ವೀಕರಿಸಿದರು.**



30.08.2022 ಸೌತಡ್ಕ : ಶ್ರೀಮತಿ ಪ್ರೀತಾ ಬಾಲಕೃಷ್ಣ ಬಾಳಕ್ಕ ಇವರು ಕುಟುಂಬ ಸಮೇತರಾಗಿ ಸೇವಧಾಮಕ್ಕೆ ಭೇಟಿ ನೀಡಿ ಕೇಂದ್ರದ ಕಾರ್ಯಚಟುವಟಿಕೆಗಳಿಗೆ ರೂ. 2000/– ಗಳನ್ನು ದೇಣಿಗೆಯಾಗಿ ನೀಡಿದರು.



**25.08.2022 ಸೌತಡ್ಕ : ಶ್ರೀ ಬಾಲಸುಬ್ರಹ್ಮಣ್ಯನ್, ಬೆಂಗಳೂರು ಇವರು ಸೇವಾಧಾಮ ಕೇಂದ್ರಕ್ಕೆ ಭೇಟಿ ಕೊಟ್ಟು ರೂ. 1000/– ದೇಣಿಗೆಯನ್ನು ನೀಡಿದರು.**

## ಆಗಸ್ಟ್ ತಿಂಗಳಲ್ಲಿ ದೇಣಿಗೆ ನೀಡಿದ ಸಂಘ ಸಂಸ್ಥೆಗಳು

| | |
|---|---|
| ಡಾ. ಉದಯಶಂಕರ್ ಹೆಚ್.ಜಿ., ಪ್ರಶಮಿನಿ ಟ್ರಸ್ಟ್, ಕೊಪ್ಪ | 50,000 |
| ಹೆರ್ಗ ವ್ಯವಸಾಯ ಸೇವಾ ಸಹಕಾರಿ ಸಂಘ, ಉಡುಪಿ | 50,000 |

## ಮಹನೀಯ ದಾನಿಗಳು

| | |
|---|---|
| ಶ್ರೀ ಎಂ. ಗಿರೀಶ್ ರಾಘವ್, ಚೆನ್ನೈ | 15,800 |
| ಶ್ರೀಮತಿ ಗಾಯತ್ರಿ ಎಂ., ಕೊಕ್ಕಡ | 10,000 |
| ಶ್ರೀ ಅವಿನಾಶ್ ಶೆಟ್ಟಿ, ಕನ್ಯಾಡಿ | 10,000 |
| ಶ್ರೀ ಲಕ್ಷ್ಮಿನಾರಾಯಣ ರೈ, ಕಾಸರಗೋಡು | 5000 |
| ಶ್ರೀ ವಿನೋದ್ ಖಾಡಿಲ್ಕರ್, ಬೆಂಗಳೂರು | 5000 |
| ಶ್ರೀಮತಿ ಪ್ರೀತಾ ಬಾಲಕೃಷ್ಣ | 2000 |
| ಶ್ರೀಮತಿ ಮಂಜುಳಾ ಹರೀಶ್, ಮೈಸೂರು | 2000 |
| ಶ್ರೀ ವಿನಾಯಕ ರಾವ್, ಕನ್ಯಾಡಿ | 2000 |
| ಶ್ರೀ ಬಾಲಸುಬ್ರಹ್ಮಣ್ಯ, ಬೆಂಗಳೂರು | 1000 |
| ಶ್ರೀ ಪ್ರಶಾಂತ್, ಹಾವೇರಿ | 1000 |
| ಶ್ರೀ ಸತ್ಯನಾರಾಯಣ ರಾವ್, ಧರ್ಮಸ್ಥಳ | 1000 |
| ಶ್ರೀ ರಾಜಣ್ಣ | 500 |
| ಶ್ರೀ ಶರಣಬಸವ | 500 |

## ಸೇವಾನಿಧಿ ದಾನಿಗಳು

| | |
|---|---|
| ಶ್ರೀ ಮಧ್ವಮೂರ್ತಿ ಪಿ., ಉಡುಪಿ | 5000 |
| ಶ್ರೀ ಶಂಕರನಾರಾಯಣ ರಾವ್, ಉಡುಪಿ | 5000 |
| ಶ್ರೀ ರಾಮ್‌ದಾಸ್ ಭಂಡಾರ್ಕರ್, ಉಜಿರೆ | 2000 |
| ಶ್ರೀ ಗುರುರಾಜ್, ಧರ್ಮಸ್ಥಳ | 1000 |
| ಶ್ರೀ ಶ್ರೀಧರ್ ಕೆ.ವಿ, ಉಜಿರೆ | 1000 |
| ಶ್ರೀ ಸೂರ್ಯನಾರಾಯಣ ರಾವ್, ದೊಂಡೋಲೆ | 1000 |
| ಶ್ರೀ ಡಿ.ಎನ್. ಗಿರೀಶ್, ಧರ್ಮಸ್ಥಳ | 1000 |
| ಶ್ರೀಮತಿ ಛಾಯ ಸಿ.ಎಸ್, ಉಜಿರೆ | 500 |
| ಶ್ರೀ ಕೃಷ್ಣಪ್ಪ ಗುಡಿಗಾರ್, ಕಲ್ಮಂಜ | 500 |
| ಶ್ರೀ ರಾಮಕೃಷ್ಣ ಭಟ್, ಕನ್ಯಾಡಿ | 500 |
| ಮಾ। ಅದ್ವಿತ್ ಪೈ, ಕನ್ಯಾಡಿ | 500 |
| ಶ್ರೀ ಕಾರ್ತಿಕ್.ಕೆ, ಧರ್ಮಸ್ಥಳ | 500 |
| ಶ್ರೀ ಪುರುಷೋತ್ತಮ್ ಡಿ.ಎ, ಧರ್ಮಸ್ಥಳ | 500 |
| ಶ್ರೀ ಶಾಂತದುರ್ಗ | 500 |
| ಶ್ರೀ ಮಧುಸೂಧನ್, ಉಜಿರೆ | 500 |
| ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ | 500 |
| ಶ್ರಿಮತಿ ಬಬಿತ, ಕನ್ಯಾಡಿ | 500 |
| ಶ್ರೀ ಸಂತೋಷ್ ಎನ್., ಗುರುವಾಯನಕೆರೆ | 500 |
| ಶ್ರೀ ಈಶ್ವರ್ ಭಟ್, ಉಜಿರೆ | 500 |
| ಶ್ರೀ ವಸಂತ ಗೌಡ, ಕನ್ಯಾಡಿ | 500 |
| ಶ್ರೀಮತಿ ಶಾಂತ ಸುರೇಶ್, ಬೆಳಾಲ್ | 500 |
| ಶ್ರೀ ರಜತ್ ಕುಮಾರ್ ಜೆ.ಡಿ., ಕನ್ಯಾಡಿ | 300 |
| ಶ್ರೀ ಜಯಾನಂದ, ಕನ್ಯಾಡಿ | 250 |
| ಶ್ರೀ ಜಿ. ವಿಜಯ, ಉಜಿರೆ | 250 |
| ಶ್ರೀ ಸುನೀಲ್ ಕುಮಾರ್, ದೊಂಡೋಲೆ | 200 |
| ಶ್ರೀ ವಿ. ಪುರಂದರ, ಧರ್ಮಸ್ಥಳ | 200 |

**ನಮ್ಮ ಬೆನ್ನುಹುರಿಗೆ ಅಪಘಾತಗೊಂಡಿರುವುದೇ ಹೊರತು ಯೋಚನಾ ಸಾಮರ್ಥ್ಯಕ್ಕಲ್ಲ**

## ನಮ್ಮ ಭೇಟಿಗಳು



**ಉಡುಪಿ–13.08.2022:** ಸಲಹಾ ಸಮಿತಿ ಸದಸ್ಯರಾದ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ ಇವರು ಸಂಸತ್ ಮತ್ತು ಕೇಂದ್ರ ಕೃಷಿ ಕಲ್ಯಾಣ ರಾಜ್ಯ ಸಚಿವರಾದ ಮಾನ್ಯ ಶೋಭಾ ಕರಂದ್ಲಾಜೆಯವರನ್ನು ಭೇಟಿಮಾಡಿ ಸೇವಾಭಾರತಿಯ ಚಟುವಟಿಕೆಗಳಿಗೆ ಮತ್ತು ಅಗತ್ಯತೆಗಳಿಗೆ ಕೈಜೋಡಿಸುವಂತೆ ಕೋರಲಾಯಿತು.



**08.08.2022:** ಮಾಜಿ ವಿಕಲಚೇತನ ಆಯುಕ್ತರಾದ ರಾಜಣ್ಣ ಅವರೊಂದಿಗೆ ಚಾಮರಾಜನಗರದ ಮಾರ್ಗದರ್ಶಿ ಕಚೇರಿಯಲ್ಲಿ ಸೇವಾಭಾರತಿಯ ತಂಡ ಭವಿಷ್ಯದ ಯೋಜನೆಗಳ ಬಗ್ಗೆ ಚರ್ಚೆಯನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ರಾಯನ್ ಫೆರ್ನಾಂಡೀಸ್, ರೂಪಲಕ್ಷ್ಮಿ ಇವರು ಉಪಸ್ಥಿತಿಯಲ್ಲಿದ್ದರು.

## ಆನ್ ಲೈನ್ ಕಾರ್ಯಗಾರ




05.08.2022 ಸೇವಾಧಾಮ ಶೀರ್ಷಿಕೆಯಡಿ ಸೇವಾಭಾರತಿ ಕನ್ಯಾಡಿ ಇದರ ವತಿಯಿಂದ ಬೆನ್ನುಮೂಳೆ ಮುರಿತಕ್ಕೊಳಗಾದವರಿಗೆ ಪಿಸಿಯೋಥರಪಿಯ ಮಹತ್ವದ ಬಗ್ಗೆ ಆನ್‌ಲೈನ್ ಕಾರ್ಯಗಾರವನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಜೆ.ಎಸ್.ಎಸ್. ಫಿಸಿಯೋಥೆರಪಿ ಕಾಲೇಜು, ಮೈಸೂರು ಇದರ ಅಸಿಸ್ಟೆಂಟ್ ಪ್ರೊಫೇಸರ್ ಡಾ. ಸಂದೀಪ್ ಪಿ.ಹೆಚ್ ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. 95 ಜನ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

## – ಕುಮಟಾ ಭೇಟಿ –



**ಕುಮಟಾ–29.08.2022:** ನಮ್ಮ ತಂಡವು ದಂತ ವೈದ್ಯ ಡಾ. ಸುರೇಶ್ ಹೆಗ್ಡೆ ಅವರನ್ನು ಭೇಟಿಮಾಡಿ ಸಂಸ್ಥೆಯ ಬಗ್ಗೆ ಮಾಹಿತಿ ನೀಡಿದೆವು ಮತ್ತು ಮುಂದಿನ ದಿನಗಳಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಸೇವಾಭಾರತಿಯ ಕಾರ್ಯಚಟುವಟಿಕೆಗಳನ್ನು ವಿಸ್ತರಿಸುವ ಬಗ್ಗೆ ಚರ್ಚಿಸಿ ಅವರ ಸಹಕಾರವನ್ನು ಕೋರಲಾಯಿತು. ಈ ಸಂದರ್ಭದಲ್ಲಿ ಕುಮಟಾ ಸೇವಾಭಾರತಿಯ ಕಾರ್ಯಕರ್ತ ಶ್ರೀ ಮೋಹನ್ ಗುನಗಾ ಉಪಸ್ಥಿತರಿದ್ದರು. ಈ ತಂಡದಲ್ಲಿ ಸೇವಾಭಾರತಿಯ ಅಧ್ಯಕ್ಷರಾದ ಕೆ.ವಿನಾಯಕ ರಾವ್, ಕಾರ್ಯಕಾರಿ ನಿರ್ದೇಶಕಿ ರೂಪಲಕ್ಷ್ಮಿ, ಜಿಲ್ಲಾ ಸಂಯೋಜಕರಾದ ಆಶ್ರೀತ್ ಸಿ.ಪಿ., ಪುರುಷೋತ್ತಮ ಉಪಸ್ಥಿತರಿದ್ದರು.



**26.08.2022 :** ಸೇವಾಭಾರತಿ ತಂಡ ನಿಟ್ಟೆ ನ್ಯಾಯಮೂರ್ತಿ ಕೆ.ಎಸ್ ಹೆಗ್ಡೆ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್‌ಗೆ ಭೇಟಿ ನೀಡಿ ಬೆನ್ನುಹುರಿ ಅಪಘಾತ ಮತ್ತು ನಿರ್ವಹಣೆ ಕುರಿತು ಜಾಗೃತಿ ಕಾರ್ಯಗಾರ ನೀಡಿದ್ದು, 80 ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಸೇವಾಧಾಮದ ನಿರ್ದೇಶಕರಾದ ರಾಯನ್ ಫೆರ್ನಾಂಡಿಸ್‌ರವರು ಸಂಪನ್ಮೂಲ ವ್ಯಕ್ತಿಯಾಗಿದ್ದರು. ಸಂವೇದನಾ ಅಸೋಸಿಯೇಷನ್ ನ ಮುಖ್ಯಸ್ಥರಾದ ಪ್ರೋ. ರಾಕೇಶ್ ಶೆಟ್ಟಿಯವರ ಸಹಕಾರದೊಂದಿಗೆ ಜಾಗೃತಿ ಕಾರ್ಯಗಾರವು ಸಫಲವಾಯಿತು. ಸೇವಾಭಾರತಿ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕಿ ರೂಪಲಕ್ಷ್ಮಿ, ಸಲಹಾ ಸಮಿತಿ ಸದಸ್ಯರಾದ ವಿಷ್ಣುಪ್ರಸಾದ್ ಹಾಗೂ ಸ್ವಯಂಸೇವಕ ಐವನ್ ಫೆರ್ನಾಂಡಿಸ್ ಉಪಸ್ಥಿತರಿದ್ದರು.

## ಸೇವಾಧಾಮದಲ್ಲಿ ಮಾದರಿ ಹುಟ್ಟುಹಬ್ಬ ಆಚರಣೆ



**ಕೊಕ್ಕಡ 23.08.22:** ಶ್ರೀಮತಿ ಗಾಯತ್ರಿ ಎಂ., ಕೊಕ್ಕಡ ಇವರು ಕುಟುಂಬಸ್ಥರೊಂದಿಗೆ ಸೇವಾಧಾಮ ಬೆನ್ನುಹುರಿ ಅಪಘಾತ ಕ್ಕೊಳಗಾದವರಿಗಾಗಿರುವ ಪುನಃಶ್ಚೇತನ ಕೇಂದ್ರಕ್ಕೆ ಆಗಮಿಸಿ ಸರಳವಾಗಿ ತಮ್ಮ 50ನೇ ಹುಟ್ಟುಹಬ್ಬವನ್ನು ಆಚರಿಸಿದರು. ಸನಿವಾಸಿಗಳಿಗೆ ಗಾಲಿಕುರ್ಚಿಗಾಗಿ ರೂ. 10,000/–ವನ್ನು ಸಂಸ್ಥೆಗೆ ದೇಣಿಗೆಯಾಗಿ ನೀಡಿದರು. ಈ ಸಂದರ್ಭದಲ್ಲಿ ಮಧ್ಯಾಹ್ನದ ಭೋಜನದ ವ್ಯವಸ್ಥೆಯನ್ನು ಮಾಡಿರುತ್ತಾರೆ.

## ಪ್ಲಾಸ್ಟಿಕ್ ನಿಷೇಧ ಜಾಗೃತಿ: ದೇಶ ಪರ್ಯಟನೆ




**11.08.2022 :** ಕ್ಯಾನ್ಸರ್‌ಕಾರಕ ಹಾಗೂ ಹೃದಯ ಸಂಬಂಧಿ ಕಾಯಿಲೆಗಳಿಗೆ ಮಾರಕವಾಗುವ ಪ್ಲಾಸ್ಟಿಕ್ ಅನ್ನು ನಿಷೇಧಿಸುವ ಸಲುವಾಗಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ದೇಶ ಪರ್ಯಟನೆ ಕೈಗೊಂಡಿರುವ ಮಧ್ಯಪ್ರದೇಶದ ಬ್ರಿಜೇಶ್ ಶರ್ಮ ಕರ್ನಾಟಕಕ್ಕೂ ಆಗಮಿಸಿದ್ದು, ಶನಿವಾರ ಬೆಳ್ತಂಗಡಿ ತಾಲೂಕಿನ ಕೊಕ್ಕಡ ಗ್ರಾಮದ ಸೌತಡ್ಕ ದೇವಾಲಯಕ್ಕೆ ಆಗಮಿಸಿದ್ದರು. ಈಗಾಗಲೇ ದೇಶದ ಎಂಟು ರಾಜ್ಯದ ಸಂಚಾರವನ್ನು ಪೂರ್ಣಗೊಳಿಸಿ 9ನೇ ರಾಜ್ಯವಾಗಿ ಕರ್ನಾಟಕಕ್ಕೆ ಆಗಮಿಸಿರುವ ಬ್ರಿಜೇಶ್, ಸೌತಡ್ಕ ಸೇವಾಧಾಮಕ್ಕೆ ಆಗಮಿಸಿ ಅಲ್ಲಿ ಕೆಲ ಸಮಯ ಕಳೆದರು.

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು**: ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಮೆಡಿಕಲ್ ಕಿಟ್‌ಗಳು.

**ಆರೋಗ್ಯ ಸ್ಪರ್ಶ** : ಉಡುಪಿ ಜಿಲ್ಲೆಯಲ್ಲಿರುವ ಬೆನ್ನು ಹುರಿ ಅಪಘಾತ ಗೊಂಡವರಿಗಾಗಿ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಮನೆಮನೆಗಳಿಗೆ ಭೇಟಿ ನೀಡಿ ಆರೋಗ್ಯ ತಪಾಸಣೆ.

**ಸಾಮರ್ಥ್ಯಮ್** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ವೃತ್ತಿ ತರಬೇತಿಗಳು.

**ಸೇವಾ ಚರಣ್** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಸಾಧನ ಸಲಕರಣೆಗಳ ಸಹಾಯ.

**ಸೇವಾನಿರ್ಮಲ**: ದಿವ್ಯಾಂಗ ಸ್ನೇಹಿ ಶೌಚಾಲಯ ಮತ್ತು ರ್‍ಯಾಂಪ್‌ಗಳಿಗೆ ಭಾಗಶಃ ಧನ ಸಹಾಯ.

**ಆರೋಗ್ಯ ಸಿಂಧು**: ಆರೋಗ್ಯ ತಪಾಸಣೆ ಮಾಹಿತಿ ಹಾಗೂ ತರಬೇತಿಗಳು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ದಿನದ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

# ವಿಶ್ವಾಸದ ಬದುಕಿಗೆ ಮಡದಿಯಾದಳು ಊರುಗೋಲು

## ಸ್ವಾಧೀನ ಕಳಕೊಂಡ ಸರ್ವೋತ್ತಮರ ಬದುಕಿಗೆ ಸೇವಾಧಾಮ ಕಲ್ಪಿಸಿತು ಪುನಃಶ್ಚೇತನ

ಯಶೋಗಾಥೆ

ಉಡುಪಿ: ಸತ್ಯದ ದಾರಿಯಲ್ಲಿ ಹೋಗು, ನೀನು ನಡೆಯುವಾಗ ಪಾತಾಳಕ್ಕೆ ಬಿದ್ದರೂ ನಿನ್ನನ್ನು ಮೇಲೆತ್ತಲು ನಾನು ಬಂದೇ ಬರುತ್ತೇನೆ ಎಂದು ಶ್ರೀಕೃಷ್ಣನ ಸಂದೇಶವೇ ಸಾರುವಂತೆ, ಜೀವನದಲ್ಲಿ ಮನುಷ್ಯ ಅಂದುಕೊಳ್ಳುವುದೊಂದು ವಿಧಿಯಾಟದ ಲೀಲೆಯೇ ಮತ್ತೊಂದು. ಸುಖೀ ಸಂಸಾರದ ಜೀವನದಲ್ಲಿ ತನ್ನದಲ್ಲದ ತಪ್ಪಿಗೆ ನಡೆದ ಅಪಘಾತವೊಂದು ನಿಷ್ಕ್ರಿಯ ಬದುಕಿನ ಸವೆದಾಟಕ್ಕೆ ಎಳೆದು ತಂದಾಗ, ಮಡದಿ ಎಂಬ ವಿಶ್ವಾಸದ ಚಿಲುಮೆ ನೀಡಿದ ಊರುಗೋಲು, ಮತ್ತೊಂದೆಡೆ ಸೇವಾಧಾಮ ಕಲ್ಪಿಸಿದ ಪುನಃಶ್ಚೇತನದ ಭರವಸೆಯಿಂದ ಮತ್ತೆ ಬದುಕಿನ ಹಳಿ ತುಳಿದ **ಉಡುಪಿ ಜಿಲ್ಲೆಯ ಹೆರ್ಗ ನಿವಾಸಿ ಸರ್ವೋತ್ತಮ ಅಮೀನರ ಯಶೋಗಾಥೆಯಿದು.**

ಉಡುಪಿ ಜಿಲ್ಲೆಯ ಹೆರ್ಗ ಗ್ರಾಮದ ಹರ್ಗ ಮೇಲ್ಮನೆಯ ಕೃಷಿ ಕುಟುಂಬದ ಸಂಜೀವ ಪೂಜಾರಿ ಮತ್ತು ಗುಲಾಬಿ ಪೂಜಾರ್ತಿಯವರ ಕೊನೆಯ ಪುತ್ರನಾಗಿ 1976 ಅಗಸ್ಟ್ 19ರಂದು ಜನಿಸಿದ ಸರ್ವೋತ್ತಮ ಅಮೀನರು ಮಣಿಪಾಲದ ಪ್ರತಿಷ್ಠಿತ ಎಂ.ಐ.ಟಿ. ಕಾಲೇಜಿನಲ್ಲಿ ಎಲೆಕ್ಟ್ರಿಕಲ್ ಟೆಕ್ನಿಷಿಯನ್ ಡಿಪ್ಲೊಮೊ ವ್ಯಾಸಂಗವನ್ನು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದರು. ಉದ್ಯೋಗಕ್ಕಾಗಿ ಕೊಯಂಬತ್ತೂರು ಹೋಗಿ ಮೂರು ವರ್ಷಗಳ ಸೇವೆ ಸಲ್ಲಿಸಿ, ನಂತರ ತಮ್ಮ ಊರಿಗೆ ಹಿಂದುರುಗಿದರು.

ಮಣಿಪಾಲದ ಉದಯ ಅಲ್ಯೂಮಿನಿಯಂ ಇಂಡಸ್ಟ್ರಿಯಲ್ ಕಂಪೆನಿಯಲ್ಲಿ ಟೆಕ್ನಿಷಿಯನ್ ಆಗಿ ವೃತ್ತಿ ಆರಂಭಿಸಿದರು. ತನ್ನ 32ನೇ ವಯಸ್ಸಿನಲ್ಲಿ ವೈವಾಹಿಕ ಜೀವನಕ್ಕೆ ಕಾಲಿಟ್ಟ ಅವರು ಒಂದು ಹೆಣ್ಣು ಮಗುವಿಗೂ ತಂದೆಯಾದರು. ಮಗುವಿನ ಭವಿಷ್ಯದ ಕನಸಿನೊಂದಿಗೆ ಮುನ್ನಡೆಯುತ್ತಿದ್ದ ದಂಪತಿಗಳಿಗೆ ಭಗವಂತ ಪರೀಕ್ಷೆ ನಡೆಸಿಯೇ ಬಿಟ್ಟಿದ್ದ. ಕೆಲಸ ಮುಗಿಸಿ ಒಂದು ದಿನ ಮನೆಗೆ ಹಿಂದಿರುಗುತ್ತಿದ್ದ ಸರ್ವೋತ್ತಮರಿಗೆ ರಸ್ತೆಯಲ್ಲಿ ಎದುರಾದ ಶ್ವಾನವೊಂದು ತನ್ನ ಬೈಕ್‌ಗೆ ಢಿಕ್ಕಿ ಹೊಡೆದ ರಭಸಕ್ಕೆ ರಸ್ತೆಗೆ ಎಸೆಯಲ್ಪಟ್ಟು ಪ್ರಜ್ಞಾಹೀನರಾಗಿ ಬಿದ್ದಿದ್ದರು. ಗೆಳೆಯರ ಸಹಕಾರದಿಂದ ಮಣಿಪಾಲ ಕೆ.ಎಂ.ಸಿ. ಅಸ್ಪತ್ರೆಗೆ ದಾಖಲಾದರು. ಚಿಕಿತ್ಸೆ ನೀಡಿದ ವೈದ್ಯರು ಬೆನ್ನುಹುರಿ ಅಪಘಾತವಾಗಿರುವುದನ್ನು ಮನೆಮಂದಿಗೆ ತಿಳಿಸಿದ್ದರು. ನಂತರ ಬೆನ್ನುಹುರಿಗೆ ಬೇಕಾದ ಎಲ್ಲ ಶಸ್ತ್ರಚಿಕಿತ್ಸೆ ನಡೆಸಿದರೂ ಎದೆ ಭಾಗದಿಂದ ಕೆಳಭಾಗ ಪೂರ್ತಿ ಸ್ವಾಧೀನ ಕಳೆದುಕೊಂಡಿದ್ದರಿಂದ ವಾಟರ್ ಬೆಡ್ ಆಶ್ರಯಿಸುವಂತಾಯಿತು. ಕಾಲ ಕಳೆದಂತೆ ಮನೆಯ ಅರ್ಥಿಕ ಪರಿಸ್ಥಿತಿ ಹದೆಗೆಡುತ್ತಾ ಸಾಗಿತು.

ಪತ್ನಿಯ ದುಡಿಮೆ ಅನಿವಾರ್ಯವಾಗಿತ್ತು. ಪತ್ನಿಯ ಆದಾಯವೇ ಮನೆಯ ಆಧಾರವಾಗಿತ್ತು. ಪತಿಯ ಜೀವನಕ್ಕೆ ತಾನೇ ಊರುಗೋಲಾಗಿ ನಿಂತ ಪತ್ನಿ ಪ್ರಮೀಳಾ ಪಾರಂಪರಿಕೆ ಆಯುರ್ವೇದ ಚಿಕಿತ್ಸೆಯನ್ನು ಕೊಡಿಸಿದರು. ಆದರೆ ಫಲಕಾರಿಯಾಗಲಿಲ್ಲ. ಸಿಲಿಕಾನ್ ಜಾಕೆಟನಿಂದ ಒತ್ತಡ ಗಾಯವಾಯಿತು. ಗಾಲಿಕುರ್ಚಿಯಲ್ಲಿ ಕುಳಿತಾಗ ಒತ್ತಡದ ಗಾಯಗಳಾದವು. (ಬೆಡ್ ಸೋರ್). ನಂತರ ಇವರು ಗಾಲಿ ಕುರ್ಚಿಯಲ್ಲಿ ಓಡಾಡುವುದನ್ನೇ ಬಿಟ್ಟರು. ಹೆಂಡತಿಯ ಸಹಾಯದಿಂದ ಮನೆಯಲ್ಲಿ ವ್ಯಾಯಾಮ ಮಾಡುತ್ತ ಹಾಸಿಗೆಯಲ್ಲಿ ಕೂರಲು ಕಲಿತರು. ದಾನಿಗಳ ಸಹಾಯದಿಂದ ರೆಟ್ರೊಫಿಟ್ಟರ್ ಸ್ಕೂಟರನ್ನು ನೀಡಿದರು. ಪತ್ನಿ ಉತ್ತೇಜನದಿಂದ ಹಂತ ಹಂತವಾಗಿ ಸ್ಕೂಟರ್ ಓಡಿಸಲು ಕಲಿತರು. ಹೀಗೆಯೆ ಹತ್ತು ವರ್ಷ ಜೀವನ ಕಳೆದು ಹೋಯಿತು.

**ಮನಸ್ಸಿಟ್ಟು ಕಲಿತ ಅಕ್ಷರ, ಮೈಬಗ್ಗಿಸಿ ದುಡಿದು ತಿನ್ನುವ ಅನ್ನ, ಕಷ್ಟಪಟ್ಟು ಗಳಿಸಿದ ಸಂಪಾದನೆ, ಇಷ್ಟದಿಂದ ಮಾಡುವ ದೈವಭಕ್ತಿ, ಯಾರನ್ನು ಯಾವತ್ತೂ ಕೈ ಬಿಡುವುದಿಲ್ಲ** ಎಂಬಂತೆ 2019ರಲ್ಲಿ ಕನ್ಯಾಡಿಯ ಸೇವಾಭಾರತಿಯ ಅಂಗಸಂಸ್ಥೆಯಾದ ಸೇವಾಧಾಮವು ಸರ್ವೋತ್ತಮ ಅವರ ಮಾಹಿತಿ ಪಡೆದು ಮನೆಗೆ ಭೇಟಿ ನೀಡಿ ಪುನಃ ಶ್ಚೇತನದ ಬಗ್ಗೆ ಮಾಹಿತಿ ತಿಳಿಯಪಡಿಸಿದಾಗ ಆಸಕ್ತಿ ತೋರಿರಲಿಲ್ಲ.



ಸೇವಾಧಾಮ ಹಾಗೂ ದಿವ್ಯಾಂಗ ಸಮಿತಿ ಸಹಭಾಗಿತ್ವದಿಂದ 2021ರಲ್ಲಿ ಸರ್ವೋತ್ತಮರಿಗೆ ಫ್ರೀಡಂ ಗಾಲಿಕುರ್ಚಿಯನ್ನು ಒದಗಿಸಿದರೂ ಅದನ್ನು ಉಪಯೋಗಿಸುವ ಬಗ್ಗೆ ತರಬೇತಿ ಅಗತ್ಯವಿತ್ತು. ಹೀಗಿರುವಾಗ 2021ರ ಏಪ್ರಿಲ್ ತಿಂಗಳಿನಲ್ಲಿ ಸೇವಾಧಾಮ ಸಂಸ್ಥಾಪಕರಾದ ಕೆ.ವಿನಾಯಕ ರಾವ್ ಮತ್ತು ನಿರ್ದೇಶಕರಾದ ರಾಯನ್ ಫೆರ್ನಾಂಡಿಸ್ ಸರ್ವೋತ್ತಮರ ಮನೆಗೆ ಭೇಟಿ ನೀಡಿ ಪುನಃಶ್ಚೇತನದ ಬಗ್ಗೆ ಮಾಹಿತಿಕೊಟ್ಟು, ಉಡುಪಿಯಲ್ಲಿ ನಡೆಯುವ ಪುನಃಶ್ಚೇತನ ಶಿಬಿರದಲ್ಲಿ ಭಾಗಿಯಾಗಲು ಕರೆ ಕೊಟ್ಟರೂ ಬರಲು ಒಪ್ಪಿರಲಿಲ್ಲ.

ಆದರೆ ಮಡದಿಯ ಉತ್ತೇಜನದಿಂದ ಉಡುಪಿಯ ಶಿಬಿರದಲ್ಲಿ ಪಾಲ್ಗೊಂಡರು. ಉಡುಪಿಯ ಶಿಬಿರದಲ್ಲಿ ಫೀಲ್ಡ್ ಕೋ ಆರ್ಡಿನೇಟರ್ ಅಖಿಲೇಶ್ ಸರ್ವೋತ್ತಮರ ಪುನಃಶ್ಚೇತನ ಕೇಂದ್ರದ ಬಗ್ಗೆ ಮಾಹಿತಿ ನೀಡಿದಾಗ ಇವರು ಮನಃಪರಿವರ್ತನೆಗೊಂಡು ಛಲದೊಂದಿಗೆ ಸೇವಾಧಾಮ ಪುನಃಶ್ಚೇತನ ಕೇಂದ್ರಕ್ಕೆ ಬರಲು ಒಪ್ಪಿದರು. ಸರ್ವೋತ್ತಮರಿಗೆ ಪ್ರತಿ ಹಂತದಲ್ಲೂ ಬೆನ್ನೆಲುಬಾಗಿ ನಿಂತ ಮಡದಿ ಇನ್ನಷ್ಟು ಬೆಂಬಲವಾಗಿ ನಿಂತರು.

**ಯಾವುದೇ ಒಳ್ಳೆಯ ಕಾರ್ಯವಾಗಲಿ ಪ್ರಯತ್ನ ಎಂಬುದು ಅಧಿಕವಾದರೆ ಹಣೆಬರಹವೂ ಕೂಡ ಶಿರಬಾಗುತ್ತದೆ, ಇದು ನಿಶ್ಚಿತ** ಎಂಬಂತೆ ಸೇವಾಧಾಮ ಪುನಃಶ್ಚೇತನಕ್ಕೆ ಆಗಮಿಸಿದ ಸರ್ವೋತ್ತಮರು ಆರಂಭದಲ್ಲಿ ಕೇರ್ ಟೇಕರ್ ಸಹಾಯದಿಂದ ಗಾಲಿಕುರ್ಚಿಯನ್ನು ಬಳಸಲು ಕಲಿತರು. ಗಾಲಿಕುರ್ಚಿಯಿಂದ ಶೌಚಾಲಯಕ್ಕೆ ತೆರಳಲು ಕಲಿತರು. ಹೀಗೆ ಹಂತ ಹಂತದ ತರಬೇತಿಯಿಂದ ಎರಡೇ ತಿಂಗಳಲ್ಲಿ ಯಾರ ಸಹಾಯವೂ ಇಲ್ಲದೆ. ಯಾರಿಗೂ ಅವಲಂಬಿತರಾಗದೆ ತನ್ನ ಕೆಲಸವನ್ನು ತಾನೆ ಮಾಡಿಕೊಳ್ಳುತ್ತಾ ಪೂರ್ತಿ ಪುನಃಶ್ಚೇತನಗೊಂಡರು ಎಂದರೆ ಅವರ ಛಲದ ಹಿಂದಿರುವ ಶಕ್ತಿಯೇ ಕಾರಣವಾಗಿತ್ತು. ಪುನಃಶ್ಚೇತನ ಕೇಂದ್ರದಿಂದ ಮರಳಿದ ಅವರಿಗೆ ಏನಾದರೂ ಉದ್ಯೋಗ ಮಾಡಬೇಕು ಎಂಬ ಇಂಗಿತ ಉಂಟಾಗಿ ಮಡದಿಗೆ ತಿಳಿಸಿದರು. ಹೀಗಿರುವಾಗ ಮಡದಿಯು ಉಡುಪಿ ನಗರಸಭೆ ವ್ಯಾಪ್ತಿಯಲ್ಲಿ ಯು.ಆರ್.ಡಬ್ಲ್ಯೂ. ಹುದ್ದೆ ಖಾಲಿ ಇರುವುದನ್ನು ಮನಗಂಡು ಅರ್ಜಿ ಸಲ್ಲಿಸಿದರು. ನಗರಸಭೆಯವರು ಸಂದರ್ಶನಕ್ಕೆ ಕರೆದರು. ಉದ್ಯೋಗವೂ ದೊರೆಯಿತು. ಇದೀಗ ತನ್ನದೆ ರೀತಿಯಲ್ಲಿ ಬೇರೆ ಬೇರೆ ಕಾರಣಗಳಿಂದ ಅಂಗವಿಕಲತೆಗೊಂಡ ಅದೆಷ್ಟೋ ಮಂದಿಗೆ ಸಹಾಯವಾಗುವಂತಹ ಯು.ಆರ್.ಡಬ್ಲ್ಯೂ ಹುದ್ದೆಯನ್ನು ನಿರ್ವಹಿಸುತ್ತಾ ಜೀವನ ಸಾಗಿಸುತ್ತಿದ್ದಾರೆ. ಭಗವಂತ ಹುಟ್ಟು ಸಾವಿನ ಮಧ್ಯೆ ತನ್ನಿಂದ ಏನನ್ನಾದರು ಕರ್ಮಸಾಧನವನ್ನು ನಿರೀಕ್ಷಿಸುತ್ತಾನೆ ಎಂಬ ಮಾತಿದೆ. ಅದೇ ರೀತಿ ಸರ್ವೋತ್ತಮರು ಬದುಕಿನ ಯಶೋಗಾಥೆ ಮಾದರಿಯಾಗಿದೆ.

*The only disability in life is bad attitude*